ಮಂಗಳೂರಿನಲ್ಲಿ ಲೆಕ್ಕಪರಿಶೋಧಕರಾಗಿರುವ ರವಿರಾಜ ಬೈಕಂಪಾಡಿ ಅವರಿಗೆ ಸಾಹಿತ್ಯ ಲೋಕವೆಂದರೆ ನೆಮ್ಮದಿಯ ತಾಣ. ಪತ್ತೇದಾರಿ ಕಥೆಗಳನ್ನು ಬರೆಯುವ ಅವರ ಮೊತ್ತ ಮೊದಲ ಪತ್ತೇದಾರಿ ಕಥೆ 'ಭವಿಷ್ಯ' ಪ್ರಕಟವಾಗಿದ್ದು ಸುಧಾ ವಾರಪತ್ರಿಕೆಯಲ್ಲಿ. ಪ್ರಸ್ತುತ ದಕ್ಷಿಣ ಕನ್ನಡ ಜಿಲ್ಲೆಯ ಸುರತ್ಕಲ್ ನಲ್ಲಿ ವಾಸವಾಗಿದ್ದಾರೆ.

'ಕರೆಕ್ಟ್! ಉಳಿದ ಕಡೆಯೆಲ್ಲಾ ಕಟಕಟೆಯಲ್ಲಿ ದೂಳು ತುಂಬಿದೆ. ಇಲ್ಲಿ ಮಾತ್ರ ಇಲ್ಲ! ಅಂದರೆ, ಪ್ರವೀಣ ಇಲ್ಲೇ ಒರಗಿ ನಿಂತಿದ್ದಿರಬೇಕು!' ಜಾಗರೂಕತೆಯಿಂದ ಬಗ್ಗಿ, ಗಮನಿಸಿ ನೋಡಿದಾಗ, ನನಗೂ ಕಲೆ ಕಾಣಿಸಿತು! ನಂತರ ಕರಮಚಂದ ನೆಲದಲ್ಲಿ ಕುರುಹುಗಳಿಗಾಗಿ ಅರಸತೊಡಗಿದ. ನನಗೆ ಅಲ್ಲೊಂದು ಅಂಗಿಯ ಗುಂಡಿ ಕಂಡಿತು! ಅದನ್ನು ಎಚ್ಚರಿಕೆಯಿಂದ ಲಕೋಟೆಗೆ ಸೇರಿಸಿದ ಕರಮಚಂದ. ಮತ್ತೆ ಕಣ್ಣು ರಾಚಿದ್ದು ಬಿದ್ದ ಸಿಗರೇಟಿನ ಬೂದಿ, ತುಂಡುಗಳು! ಪ್ರಾಯಶಃ ತಮ್ಮಯ್ಯನಿಗಾಗಿ ಕಾಯುತ್ತಾ, ಪ್ರವೀಣ ಸಿಗರೇಟು ಸುಟ್ಟಿರಬೇಕು. ವಿವಿಧ ಮಾದರಿಯ ಸಿಗರೇಟುಗಳನ್ನು ಗುರುತಿಸುವುದರಲ್ಲಿ ಪರಿಣಿತನಾದ ಕರಮಚಂದ ಅದನ್ನು ಸೂಕ್ಷ್ಮವಾಗಿ ಗಮನಿಸಿ ಉಸುರಿದ, 'ಎಸ್ಸೆ ಬ್ಲಾಕ್ ಸಿಗರೇಟು! ದುಬಾರಿ ವಿದೇಶೀ ಮಾಲು!'

ಅವುಗಳು ಕರಮಚಂದನ ಲಕೋಟೆ ಸೇರಿದವು. ನಾವು ತಾರಸಿಯಲ್ಲಿ ಒಮ್ಮೆ ತಿರುಗಾಡಿದೆವು. ಎಲ್ಲಿಯೂ ಸಿಸಿ ಕ್ಯಾಮೆರಾ ಕಾಣಿಸಲಿಲ್ಲ.

'ಕರಮಚಂದ, ಎದುರಿನ ಕೊಡವ ಸಮಾಜದ ಕಟ್ಟಡದಲ್ಲಿ ಸಿಸಿ ಕ್ಯಾಮೆರಾ ಇದ್ದಲ್ಲಿ, ಅದರಲ್ಲಿ ಈ ಜಾಗ ಕಾಣಿಸುವ ಸಾಧ್ಯತೆಯಿದೆ'.

ನಂತರ ನಾವು ಸರಕಾರಿ ಆಸ್ಪತ್ರೆಗೆ ಹೋದೆವು. ಅಲ್ಲಿ ಶವಾಗಾರದಲ್ಲಿದ್ದ ಪ್ರವೀಣನ ದೇಹವನ್ನು ಪರಿಶೀಲಿಸಿದಾಗ ಕೆಲವು ಸಂಗತಿಗಳು ಕರಮಚಂದನ ಅನುಮಾನವನ್ನು ಸಮರ್ಥಿಸಿದವು. ಪ್ರವೀಣನ ಅಂಗಿಯಲ್ಲಿ ಒಂದು ಗುಂಡಿ ಮಾಯವಾಗಿತ್ತು! ಇನ್ನೊಂದು, ಆತನ ಎಡಭುಜದ ಹಿಂಭಾಗದಲ್ಲಿ ಆಳವಾದ ಗಾಯ! 'ಇದು ಆ ಛಾವಣಿಯ ಹೊಡೆತದಿಂದ ಆದದ್ದು. ಬಲ ಭುಜದಲ್ಲಿ ಯಾವುದೇ ಗಾಯಗಳಿಲ್ಲವೇಕೆ?' ಕರಮಚಂದನ ಅನುಮಾನ. ತುಸು ಹೊತ್ತು ಪರಿಶೀಲನೆ ನಡೆಸಿದ ನಂತರ ನಾವು ಅಲ್ಲಿಂದ ಹೊರಬಿದ್ದೆವು.

ಸಂಜೆ ನಾವು ಠಾಣೆಗೆ ಹೋದಾಗ ಡಿಸೋಜ ತುಸು ಬಿಡುವಿನಲ್ಲಿದ್ದಂತೆ ಇದ್ದ. 'ನಿಮ್ಮ ಕಕ್ಷಿದಾರನ ಕೇಸಿನಲ್ಲಿ ಏನಾದರೂ ಬೆಳವಣಿಗೆ ಇದೆಯಾ?' ಕೇಳಿದ ಅಧಿಕಾರಿ.

'ನಿಮಗೆ ದೊರಕಿದ ಸಾಕ್ಷ್ಯಗಳು ಎಷ್ಟು ಬಲವಾಗಿವೆ ಅಂತ ತಿಳಿಯಲು ಬಂದಿದ್ದೇವೆ'.

'ತಮ್ಮಯ್ಯನಿಗೆ ಜೀವಾವಧಿ ಗ್ಯಾರಂಟಿ! ಶ್ರೀಮತಿ ಅನಿತಾ ಅನ್ನುವಾಕೆ ತಮ್ಮಯ್ಯ ಎಂಟೂ ಕಾಲಕ್ಕೆ ಮೇಲುಗಡೆ ಹೋಗಿದ್ದನ್ನು ಕಂಡಿದ್ದಾಗಿ ಹೇಳಿದ್ದಾಳೆ. ಪ್ರವೀಣನ ಫೋನಿನಲ್ಲಿ ತಮ್ಮಯ್ಯ ಕಳಿಸಿದ ಸಂದೇಶವಿದೆ. ಹತ್ತು ಗಂಟೆಗೆ ಬರುವಂತೆ ತಿಳಿಸಿದ್ದು. ಅವರ ನಡುವಿನ ಹಣಕಾಸು ವೈಮನಸಿನ ಬಗ್ಗೆ ಪ್ರವೀಣನ ಕಚೇರಿಯ ಸಿಬ್ಬಂದಿಯೇ ಸಾಕ್ಷ್ಯ ನುಡಿದಿದ್ದಾರೆ... ಪ್ರವೀಣನಿಗೆ ವಂಚಿಸಿ, ತಮ್ಮಯ್ಯ ಹಣ ಲಪಟಾಯಿಸಿದ್ದಾನಂತೆ. ಇದನ್ನು ತಿಳಿಸಿದವನು ವಸಂತ ಮುತ್ತಪ್ಪ. ಆತ ಪ್ರವೀಣನ ಪ್ರಾಣ ಸ್ನೇಹಿತ ಹಾಗೂ ಆತನ ವ್ಯವಹಾರದಲ್ಲಿ ಸಹಾಯಕ ಕೂಡ. ಆತನ ಹೇಳಿಕೆಯಂತೆ ಎರಡು ಬಾರಿ ತಮ್ಮಯ್ಯ ಕೊಲೆಯ ಧಮಕಿ ಹಾಕಿದ್ದಾನಂತೆ. ತ್ರಿಶಾಲಿ ಎನ್ನುವ ಹುಡುಗಿಯ ವಿಚಾರಣೆ ಮಾಡಬೇಕಷ್ಟೇ. ಆಕೆ ಪ್ರವೀಣನ ಮಾಜಿ ಪ್ರೇಯಸಿ'.

'ಶಾಭಾಶ್, ಒಂದೇ ದಿನದಲ್ಲಿ ಬಹಳಷ್ಟು ತನಿಖೆ ಮಾಡಿದ್ದೀರಿ. ನಿಮ್ಮ ಥಿಯರಿಯಂತೆ ಕೊಲೆ ಹೇಗೆ ಸಂಭವಿಸಿದೆ? ಕೊಲೆಗೆ ಮೋಟಿವ್ ಏನು?'

'ಇದು ಉದ್ದೇಶಪೂರಿತ ಕೊಲೆಯಲ್ಲ. ಮುತ್ತಪ್ಪನ ಹೇಳಿಕೆಯಂತೆ ಪ್ರವೀಣ ಮಾನಸಿಕ ಖಿನ್ನತೆಗೆ ಒಳಗಾಗಿದ್ದ. ಆತ ಆತ್ಮಹತ್ಯೆ ಮಾಡಿಕೊಳ್ಳುವ ಬಗ್ಗೆಯೂ ಮಾತಾಡುತ್ತಿದ್ದ. ಅದು ತಿಳಿದು, ಆತನನ್ನು ಸಂತೈಸಲು ತಮ್ಮಯ್ಯ ಕರೆಸಿದ್ದಾನೆ. ಅಲ್ಲಿ ಇಬ್ಬರ ನಡುವೆ ನಡೆದ ವಾಗ್ಯುದ್ಧ ವಿಪರೀತಕ್ಕೆ ಹೋಗಿ, ಕೋಪದಿಂದ ಪ್ರವೀಣನನ್ನು ತಮ್ಮಯ್ಯ ತಳ್ಳಿದಾಗ, ಆತ ಕೆಳಗೆ ಬಿದ್ದಿರಬೇಕು. ಅನುದ್ದೇಶಪೂರಿತವಾದ ಕೊಲೆ!'